**ದಿನಾಂಕಃ 16-04-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎ.ಟಿ.ಎಸ್. ವಕೀಲರಿಂದಃ**

ನಾನು ಅಪಘಾತದವನ್ನು ಕಣ್ಣಾರೆ ನೋಡಿಲ್ಲ ಆದರೆ ಅಪಘಾತದ ನಂತರ ಸ್ಥಳಕ್ಕೆ ಹೋಗಿ ನೋಡಿರುತ್ತೇನೆ. ಮೃತ ಶಿವರಾಜುರವರು 1 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಶಿವರಾಜು 1 ನೇ ಎದುರುದಾರರ ಬಳಿ ಕೆಲಸ ಮಾಡುವ ಬಗ್ಗೆ ದಾಖಲೆ 1 ನೇ ಎದುರುದಾರರ ಬಳಿ ಇರುತ್ತದೆ ಆದರೆ ವೇತನ ಕೊಡುತ್ತಿರುತ್ತಾರೆ. ನಾನು ಅರ್ಜಿದಾರರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲಾರಿಯಲ್ಲಿ ಕೋಳಿಯನ್ನು Unload ಮಾಡಲು ಹೋದ ದಿನಾಂಕ ಗೊತ್ತಿಲ್ಲ. ಮೃತ ಶಿವರಾಜು ಹೋದ ವಾಹನದ ಸಂಖ್ಯೆ ಗೊತ್ತಿಲ್ಲ. ಮೃತ ಶಿವರಾಜು ತುಮಕೂರಿನಿಂದ ಬೇರೆ ವಾಹನದಲ್ಲಿ ಲಿಫ್ಟ್ ಕೇಳಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. EICHER ವಾಹನದಲ್ಲಿ 6 ಜನ ಪ್ರಯಾಣಿಕರು ಇರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಇಬ್ಬರು ಮಾತ್ರ ಇರುತ್ತಾರೆ. 1 ನೇ ಎದುರುದಾರರಿಗೆ ಶಿವರಾಜು ಪರಿಚಯ ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ.ಬಿ.ಟಿ.ಎಲ್. ವಕೀಲರಿಂದಃ**

ನನಗೆ ನ್ಯಾಯಾಲಯದಿಂದ ನೋಟೀಸು ಬಂದಿರುವುದಿಲ್ಲ. ನಾನು ನ್ಯಾಯಾಲಯಕ್ಕೆ 1 ನೇ ಅರ್ಜಿದಾರರ ಜೊತೆ ಬಂದಿರುತ್ತೇನೆ. 1 ನೇಅರ್ಜಿದಾರರು ಸಾಕ್ಷಿ ಹೇಳಲು ಕರೆದಾಗ ಬಂದಿರುತ್ತೇನೆ. ನಾನು ಮತ್ತು 1 ನೇ ಅರ್ಜಿದಾರರು ಆತ್ಮೀಯರು ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಬಳಿ 2016-17 ನೇ ಸಾಲಿನಲ್ಲಿ ಕೆಲಸ ಮಾಡುತ್ತಿರುತ್ತೇನೆ. ನಾನು 1 ನೇ ಎದುರುದಾರರ ಬಳಿ ಕೆಲಸ ಮಾಡುವ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೃತ ಶಿವರಾಜು ಹೋಗುತ್ತಿದ್ದ EICHER ವಾಹನ ಸರಕು ಸಾಗಣೆ ವಾಹನ

ಎಂದರೆ ಸರಿ. ಸಾದರಿ EICHER ವಾಹನದಲ್ಲಿ 6 ಜನ ಪ್ರಯಾಣಿಕರು ಇರುತ್ತಾರೆ ಎಂದರೆ ಸರಿಯಲ್ಲ. ಮೃತ ಶಿವರಾಜು 1ನೇ ಎದುರುದಾರರ ಬಳಿ ಮತ್ತು ಉಳಿಕೆಯವರು ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1ನೇ ಅರ್ಜಿದಾರರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.